ಮುಖ್ಯಮಂತ್ರಿಯವರು ಏನು ಉತ್ತರವನ್ನು ಹೇಳುತ್ತಾರೆ, ಅದಕ್ಕಾಗಿ ಇವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾರೆ. ಈ ಶೂನ್ಯ ವೇಳೆಯನ್ನು ನಾಳೆ, ನಾಡಿದ್ದು, ತೆಗೆದುಕೊಳ್ಳೋಣ. ಗೋಪಾಲ ಪೂಜಾರಿಯವರದು ಕುಂದಾಪುರಕ್ಕೆ ಸಂಬಂಧಿಸಿದಂತೆ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

4. ಗಮನ ಸೆಳೆಯುವ ಸೂಚನೆ

ವಿಷಯ: ಕುಂದಾಪುರದಲ್ಲಿ ಕೆಪಿಟಿಸಿಎಲ್ ವಿಭಾಗೀಯ ಕಛೇರಿಯನ್ನು ತೆರೆಯುವ ಬಗ್ಗೆ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) :– ಮಾನ್ಯ ಅಧ್ಯಕ್ಷರೇ ಕುಂದಾಪುರದಲ್ಲಿ ಕೆಪಿಟಿಸಿಎಲ್ ಕಛೇರಿಯನ್ನು ತೆರೆಯುವ ಬಗ್ಗೆ ಮಾನ್ಯ ಇಂಧನ ರಾಜ್ಯಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಉತ್ತರವನ್ನು ನೀಡಲು ಬಯಸುತ್ತೇನೆ.

ಕುಂದಾಪುರದಲ್ಲಿ ವಿಭಾಗೀಯ ಕಛೇರಿಯನ್ನು ತೆರೆಯುವ ಪ್ರಸ್ತಾವನೆಯು ಪ್ರಾರಂಭಿಕ ಹಂತದಲ್ಲಿರುತ್ತದೆ.

10ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸ್ಥಾಪಿಸಬೇಕಾಗಿರುವ ವಿದ್ಯುತ್ ಸಬ್ - ಸ್ಟೇಷನ್ನುಗಳ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಒಂದು ಅಧ್ಯಯನವನ್ನು ನಡೆಸಿದ್ದು, ಈ ಅಧ್ಯಯನದ ಪ್ರಕಾರ ಕುಂದಾಪುರ ತಾಲ್ಲೂಕಿನ ನಾವುಂದ ಗ್ರಾಮದಲ್ಲಿ ಒಂದು 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ಸ್ಥಾಪನೆಯ ಪ್ರಸ್ತಾಪವು ಇರುವುದಿಲ್ಲ.

ಈ ಹಿಂದೆ ನಾವುಂದ ಗ್ರಾಮದ ಆಸುಪಾಸಿನಲ್ಲಿ ಒಂದು ಸಿಮೆಂಟ್ ಕೈಗಾರಿಕೆಯು ಸ್ಥಾಪನೆಗೊಳ್ಳುವ ಪ್ರಸ್ತಾಪ ಇದ್ದುದರಿಂದ, ಈ ಸಿಮೆಂಟ್ ಕೈಗಾರಿಕೆಯ ವಿದ್ಯುತ್ ಬೇಡಿಕೆಯ ಪೂರೈಕೆಗಾಗಿ ನಾವುಂದದಲ್ಲಿ ಒಂದು 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿತ್ತು. ಆದರೆ ಈ ಸಿಮೆಂಟ್ ಕೈಗಾರಿಕೆಯ ಪ್ರಸ್ತಾಪವು ರದ್ದಾದುದರಿಂದ, ನಾವುಂದದಲ್ಲಿ 110 ಕೆ.ವಿ. ಸಬ್ - ಸ್ಟೇಷನ್ನಿನ ಪ್ರಸ್ತಾವನೆಯನ್ನು ಸಹಾ ಕೈಬಿಡಲಾಯಿತು.

ಈಗ ಬೈಂದೂರು ಹಾಗೂ ತಲ್ಲೂರುನಲ್ಲಿರುವ 33 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನುಗಳ ಮೇಲೆ ಅಧಿಕ ಹೊರೆ ಬೀಳುತ್ತಿರುವುದರಿಂದ ನಾವುಂದದಲ್ಲಿ 110 ಕೆ.ವಿ. ಸಬ್-ಸ್ಟೇಷನ್ನಿನ ನಿರ್ಮಾಣದ ಬಗ್ಗೆ ಪುನಃ ಪರಿಶೀಲಿಸಬೇಕಾಗಿರುತ್ತದೆ. 1-6-2002 ರ ನಂತರ ವಿದ್ಯುತ್ ಸರಬರಾಜು ಕಂಪನಿಗಳು ಅಸ್ತಿತ್ವಕ್ಕೆ ಬಂದಿರುವುದರಿಂದ, ಯಾವುದೇ ಹೊಸ ವಿದ್ಯುತ್ ಸಬ್ - ಸ್ಟೇಷನ್ನುಗಳ ನಿರ್ಮಾಣದ ಬಗ್ಗೆ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ, ಸದರಿ ವಿದ್ಯುತ್ ಸಬ್ - ಸ್ಟೇಷನ್ನಿನ ಸ್ಥಾಪನೆ ಬಗ್ಗೆ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗುತ್ತಿದೆ. ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಲಾಗುವುದು. ತಾಂತ್ರಿಕ ಸಮನ್ವಯ ಸಮಿತಿಯು ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು.